ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಮುಕ್ತ ಮಾರುಕಟ್ಟೆಯಲ್ಲಿ ಅವಶ್ಯಕ ವಸ್ತುಗಳ ಬೆಲೆಗಳನ್ನು ಹತೋಟಿಯಲ್ಲಿಡಲು ಅಗತ್ಯ ವಸ್ತುಗಳಾದ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ವಿತರಣೆ ಮಾಡಲಾಗುತ್ತಿದೆ. ಅದೂ ಅಲ್ಲದೆ, ಕಾಳಸಂತೆ ಮತ್ತು ಅಕ್ರಮ ದಾಸ್ತಾನು ಮಾಡುವ ವರ್ತಕರ ವ್ಯಾಪಾರ ಸ್ಥಳಗಳ ಮೇಲೆ ಧಾಳಿ ನಡೆಸಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯದ ಕೆಲವೆಡೆಗಳಲ್ಲಿ ಸಾರಾಯಿ ಮಾರಾಟದಿಂದ ಆಗುತ್ತಿರುವ ತೊಂದರೆ

204 (588) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಕೆಲವೆಡೆಗಳಲ್ಲಿ ಸಾರಾಯಿ ಮಾರಾಟದಿಂದ ಆಗುತ್ತಿರುವ ತೊಂದರೆಯನ್ನು ಮನಗಂಡು ಆ ಪ್ರದೇಶದ ಹೆಂಗಸರು ಚಳುವಳಿ ನಡೆಸಿ, ಮಧ್ಯದ ಅಂಗಡಿಗಳನ್ನು ಮುಚ್ಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ರೀತಿ ಚಳುವಳಿ ನಡೆಯುತ್ತಿರುವ ಪ್ರದೇಶಗಳಲ್ಲಿ ಖಾಯಂ ಆಗಿ ಮದ್ಯದ ಮಾರಾಟದ ಅಂಗಡಿಗಳನ್ನು ರದ್ದುಪಡಿಸಿ ಸಾಮಾಜಿಕ ನ್ಯಾಯ ದೊರಕಿಸಿಕೊಡಲು ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಹೌದು

ಆ) ಇದು ಒಂದು ಸಿದ್ಧಾಂತದ ವಿಷಯವಾಗಿದ್ದು, ಸರ್ಕಾರ ಇದರ ಬಗ್ಗೆ ಪರಿಶೀಲಿಸುತ್ತಿದೆ.

ಯಳ್ಳೂರಿನಲ್ಲಿನ ರಾಜಹಂಸಘಡದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆ

205 (594) ಶ್ರೀ ಬಿ.ಐ. ಪಾಟೀಲ್ (ಉಚಗಾಂವ್):-

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾಂ ಜಿಲ್ಲೆ ಹಾಗೂ ತಾಲ್ಲೂಕಿನ ಯಳ್ಳೂರಿನಲ್ಲಿನ ರಾಜಹಂಸಘಡದಲ್ಲಿ ಯಾವುದಾದರೂ ಪ್ರವಾಸೋದ್ಯಮ ಅಭಿವೃದ್ಧಿ ಚಟುವಟಿಕೆಯನ್ನು ಸರ್ಕಾರ ಕೈಗೊಂಡಿದೆಯೆ ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಇ) ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಯವನ್ನು ಸರ್ಕಾರ ಯಾವಾಗ ಕೈಗೊಳ್ಳುತ್ತದೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):–

ಅ) ಇಲ್ಲ

ಆ) ರಾಜ್ಯದಲ್ಲಿ 257 ಕೇಂದ್ರಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಗುರುತಿಸಲಾಗಿದೆ. ಈ

ಕ್ಷೇತ್ರವನ್ನು ಸಹ "ಸಿ" ಗುಂಪಿನಲ್ಲಿ ಸೇರಿಸಲಾಗಿದೆ. ಸರ್ಕಾರವು ಪ್ರವಾಸೀ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಗಳನ್ನು ಮುಂದುವರಿಸುತ್ತಿದೆ.

ಇ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಘೋಷಿಸಿರುವಂತೆ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಗರಿಷ್ಠ ಸಬ್ಸಿಡಿ, ಉತ್ತೇಜನ ಮತ್ತು ರಿಯಾಯಿತಿಗಳನ್ನು ಸರ್ಕಾರ ನೀಡುವುದು.

ಮೂಡಬಿದರೆ ಪೋಲೀಸ್ ಸ್ಟೇಷನ್‌ಗೆ ಜೀಪು ಮತ್ತು ಸಿಬ್ಬಂದಿ ಹೆಚ್ಚಳ

258 (310) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):-

ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಬಿದಿರೆ ಸ್ಟೇಷನ್ ವ್ಯಾಪ್ತಿಗೆ ಎಷ್ಟು ಗ್ರಾಮಗಳು ಸೇರಿಕೊಂಡಿವೆ;

ಆ) ಇಲ್ಲಿರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು;

ಇ) ವಿಸ್ತಾರವಾದ ಈ ಪ್ರದೇಶದ ವ್ಯಾಪ್ತಿಯಲ್ಲಿ ಪೊಲೀಸರ ಕೆಲಸ ಸುಗಮಗೊಳಿಸುವಂತೆ ಇಲ್ಲಿಗೆ ಜೀಪನ್ನು ಒದಗಿಸಲಾಗುವುದೇ;

ಈ) ಈ ಸ್ಟೇಷನ್‌ಗೆ ಹೆಚ್ಚಿನ ಪೊಲೀಸ್ ಸಿಬ್ಬಂದಿಗಳ ನೇಮಕ ಮಾಡಲಾಗುವುದೇ ?

ಶ್ರೀ ರಮನಾಥ ರೈ (ರಾಜ್ಯ ಗೃಹ ಸಚಿವರು):–

ಅ) ಮೂಡಬಿದಿರೆ ಠಾಣೆಯ ವ್ಯಾಪ್ತಿಯಲ್ಲಿ 33 ಹಳ್ಳಿಗಳಿವೆ.

ಆ) ಮೂಡಿಬಿದರೆ ಠಾಣೆಯ ಸಿಬ್ಬಂದಿ ಬಲ 13.

ಇ) ಪರಿಶೀಲಿಸಲಾಗುತ್ತಿದೆ.

ಈ) ದಿನಾಂಕ: 1–4–93ರಿಂದ ಜಾರಿಗೆ ಬರುವಂತೆ ಹೆಚ್ಚಿನ ಸಿಬ್ಬಂದಿ ನೇಮಕ ಮಾಡಲಾಗಿದೆ.

ಹುಬ್ಬಳ್ಳಿ ತಾಲ್ಲೂಕು ಸೂಲ್ಲಿ ಗ್ರಾಮಕ್ಕೆ ಹೊಸ ಪೋಲೀಸ್ ಠಾಣೆ

237 (486) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ):-

ರಾಜ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ತಾಲ್ಲೂಕು, ಸೂಲ್ಲಿ ಗ್ರಾಮವು ನ್ಯಾಷನಲ್ ಹೈವೆ 4ರ ಪಕ್ಕದಲ್ಲಿದ್ದು, ಇದರ ಸುತ್ತಮುತ್ತ 20 ಹಳ್ಳಿಗಳು ಬರುತ್ತಿದ್ದು, ಇವರೆಲ್ಲರೂ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಹೋಗಬೇಕಾಗುವುದರಿಂದ, ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇಲ್ಲಿ ಹೊಸದಾಗಿ ಪೊಲೀಸ್ ಠಾಣೆ ಆರಂಭಿಸಿ ಪಿಎಸ್‌ಐ ಪೋಸ್ಟ್ ಮಾಡಿ ಹೊಸದಾಗಿ ಠಾಣೆಯನ್ನು ಮಂಜೂರು ಮಾಡುವಿರಾ;

ಇ) ಮಾಡದಿದ್ದಲ್ಲಿ, ಅದಕ್ಕೆ ಕಾರಣವೇನು;